<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 274/2024**

| ಸಾಕ್ಷಿಯ ಹೆಸರು | ಶ್ರೀ. ಕೃಷ್ಣಮೂರ್ತಿ | ಚಾಸಾಃ | ಫ್ರಾಸಾಃ |
|---|---|---|---|
| ತಂದೆಯ ಹೆಸರು | ಕೃಷ್ಣಪ್ಪ | 11 | 8 |
| ವಯಸ್ಸು | 55 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **08.06.2026.** | |
| ಉದ್ಯೋಗ | PSI, ಕಗ್ಗಲಿಪುರ ಠಾಣೆ | | |
| ವಾಸ ಸ್ಥಳ | ಕಗ್ಗಲಿಪುರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಆಕ್ಟೋಬರ್ 2023 ರಿಂದ ಇಲ್ಲಿಯವರೆಗ ಕಗ್ಗಲಿಪುರ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಠಾಣೆಯಲ್ಲಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 20.04.2024 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಬೆಳಗ್ಗೆ 11.30 ಗಂಟೆ ಸಮಯದಲ್ಲಿ ಚಾಸಾ. 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದನ್ನು ಪಡೆದು ಆದರ ಆಧಾರದ ಮೇಲೆ ಠಾಣಾ ಮೊಕದಮ್ಮೆ ಸಂಖ್ಯೆ 123/2024 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ.ವ. ಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರನ್ನು ಈಗ ನೋಡುತ್ತಿದ್ದು ಈಗಾಗಲೇ ನಿಶಾನೆ.ಪಿ. 4 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 4 (ಎ) ಎಂದು ಗುರುತಿಸಲಾಯಿತು. ಪ್ರ.ವ.ವ. ಅನ್ನು ನಿಶಾನೆ.ಪಿ. 8 ಎಂತಲೂ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 8 (ಎ) ಎಂದು ಗುರುತಿಸಲಾಯಿತು.

2. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚಾಯ್ತಿದಾರರಾದ ಚಾಸಾ. 3 ಮತ್ತು 4 ರವರನ್ನು ಬರಮಾಡಿಕೊಂಡು ಚಾಸಾ 1 ರವರು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಮಧ್ಯಾಹ್ನ 2.00 ರಿಂದ 3..0 ಗಂಟೆಯವರೆಗೆ ನಿಶಾನೆ.ಪಿ. 2 ರಂತೆ ಮಹಜರ್ ಮಾಡಿರುತ್ತೇನೆ. ನಿಶಾನೆ.ಪಿ. 2 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 2 (ಸಿ) ಎಂದು ಗುರುತಿಸಲಾಯಿತು. ಪಂಚರಿಗೆ ನಿಶಾನೆ.ಪಿ. 1 ರಂತೆ ನೋಟೀಸ್ ಜಾರಿ ಮಾಡಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 1 (ಸಿ) ಎಂದು

ಗುರುತಿಸಲಾಯಿತು. ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಸುಮಾರು 3 ಅಡಿ ಉದ್ದದ ಎರಡು ಪ್ಲಾಸ್ಟಿಕ್ ಪೈಪ್ ಗಳು ಮತ್ತು ಕಾಡು ಜಾತಿಯ ದೊಣ್ಣೆ, ಕಲ್ಲು, ಚಾಸಾ. 1 ರವರು ಧರಿಸಿದ್ದ ರಕ್ತ ಕಲೆಯಾಗಿದ ಕೇಸರಿ ಬಣ್ಣದ ತುಂಬು ತೋಳಿನ ಶರ್ಟ ಅನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದಿರುತ್ತೇನೆ. ಮಮಾ. 1 ರಿಂದ 5 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಜಪ್ತಿ ಮಾಡಿದ ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 60/2024 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ತೋರಿಸಲಾಗಿದೆ. ಚಾಸಾ. 1 ರವರು Activa scooter ತೋರಿಸಿದ್ದು ಹಾಗೂ ಆರೋಪಿತರು ಹೊಡೆದು ಜಖಂ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಮಹಜರ್ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆ. ಅದೇ ದಿನ ಚಾಸಾ. 3, 5, 6 ಮತ್ತು 7 ರವರ ಹೇಳಿಕೆ ದಾಖಲು ಮಾಡಿದ್ದೇನೆ.

3. ದಿನಾಂಕ 21.04.2024 ರಂದು ಗಾಯಾಳು ರವರು ದಯಾನಂದ್ ಸಾಗರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅವರ ಹೇಳಿಕೆಯನ್ನು ವೈದ್ಯರ ಸಮಕ್ಷಮ ನಿಶಾನೆ.ಪಿ. 5 ರಂತೆ ಪಡೆದಿದ್ದೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 5 (ಬಿ) ಎಂದು ಗುರುತಿಸಲಾಯಿತು. ದಿನಾಂಕ 24.04.2024 ರಂದು ರಕ್ತ ಕಲೆಯಾಗಿದ್ದ ಶರ್ಟ ಅನ್ನು FSL ಚಾಸಾ. 8 ರವರ ಮೂಲಕ ಕಳುಹಿಸಿಕೊಟ್ಟೆ. ದಿನಾಂಕ 30.04.2024 ರಂದು FSL ವರದಿಯನ್ನು ನಿಶಾನೆ.ಪಿ. 6 ರಂತೆ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 6 (ಬಿ) ಎಂದು ಗುರುತಿಸಲಾಯಿತು.

4. ದಿನಾಂಕ 18.05.2024 ರಂಂದು ಆರೋಪಿ ನಂ. 1, 4, 5, 7 ರವರುಗಳು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು ಸೂಕ್ತ ಭದ್ರತೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 02.06.2024 ರಂದು ಉಳಿದ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಹಾಜರಾಗಿದ್ದು ಸೂಕ್ತ ಭದ್ರತೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

5. ದಿನಾಂಕ 13.07.2024 ರಂದು ಗಾಯಾಳುವಿನ ಗಾಯಾದ ಪ್ರಮಾಣ ಪತ್ರವನ್ನು ನಿಶಾನೆ.ಪಿ. 7 ರಂತೆ ಪಡೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 7 (ಬಿ) ಎಂದು ಗುರುತಿಸಲಾಯಿತು. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ಮೇಲೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **NSG** ವಕೀಲರಿಂದ :

1. ದೂರನ್ನು ಯಾರು ಬರೆದುಕೊಟ್ಟರು ಎಂದು ಗೊತ್ತಿಲ್ಲ. ದೂರು ದಾಖಲಾದ ನಂತರ ನಾನು ಆಸ್ಪತ್ರೆಗೆ ಹೋಗಿದ್ದೆ. ಡಾ. ಹರ್ಷರಾಜ್ ರವರ ಸಮಕ್ಷಮ ಗಾಯಾಳು ಹೇಳಿಕೆ ನೀಡಿದ್ದರು. ಹೇಳಿಕೆ ತೆಗೆದುಕೊಳ್ಳುವಾಗ ವಿಡಿಯೋ ಮಾಡಲಿಲ್ಲ. ಯಾವುದೇ ಸಾಕ್ಷಿದಾರರ ಸಮಕ್ಷಮ ಹೇಳಿಕೆ ಪಡೆದಿಲ್ಲ. ನಾನು ಹೇಳಿಕೆ ಮಾಡುವ ಕೊಳ್ಳುವ ಕಾಲಕ್ಕೆ ಸದರಿ ಗಾಯಾಳು ಹೇಳಿಕೆ ಕೊಟ್ಟು ಸಹಿ ಮಾಡುವ ಸ್ಥಿತಿಯಲ್ಲಿ ಇದ್ದ. ಘಟನೆ ಸಮಯದಲ್ಲಿ ಗಾಯಾಳು ಮದ್ಯಪಾನ ಮಾಡಿದ್ದೋ ಇಲ್ಲವೋ ಎಂಬ ಬಗ್ಗೆ ಪರೀಕ್ಷೆ ಮಾಡಲು ನಾನು ವೈದ್ಯರಿಗೆ ಹೇಳಿಲ್ಲ.

2. ಆತ ಹೋಗಿದ್ದ ವಾಹನವನ್ನು ಪಂಚರ ಸಮಕ್ಷಮ ಪರಿಶೀಲನೆ ಮಾಡಿದ ನಂತರ ಪಿರ್ಯಾದಿಗೆ ವಾಪಸ್ಸು ನೀಡಿದ್ದೇನೆ. ಅದರ ಬಗ್ಗೆ ಮಹಜರ್ ನಲ್ಲಿ ಮಾತ್ರ ನಮೂದು ಮಾಡಿದ್ದೇನೆ. ಸದರಿ ಬೈಕ್ ಗಾಯಳವಿನ ತಾಯಿ ಸರಸ್ವತಿಯವರ ಹೆಸರಿನಲ್ಲಿ ಇದೆ. ಮಹಜರ್ ನಲ್ಲಿ ಅದರ ಬಗ್ಗೆ ನಮೂದು ಆಗಿಲ್ಲ ಎಂದರೆ ಸರಿ. ಸದರಿ ವಾಹನ ಎಷ್ಟು ಗಂಟೆಗೆ ನಮ್ಮ ವಶಕ್ಕೆ ಪಡೆದು ಎಷ್ಟು ಗಂಟೆಗೆ ವಾಪಸ್ಸು ನೀಡಿದ್ದೇವೆ ಎಂದು ಮಹಜರ್ ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ ಅಲ್ಲ. ನಾನು ಪಂಚರನ್ನು ಸ್ಥಳದಲ್ಲೆ ಕರೆದೆ. ಅವರಿಗೆ ಸ್ಥಳದಲ್ಲಿ ನೋಟೀಸ್ ಅನ್ನು ಕೊಟ್ಟೆ. ಮಹಜರ್ ಮಾಡಲು ನಾನು ಮತ್ತು ಇಬ್ಬರು ಸಿಬ್ಬಂದಿ ಹೋಗಿದ್ದೆವು. ಮಹಜರ್ ಅನ್ನು ಪ್ರಕಾಶ್ ರವರು ಮಹಜರ್ ಅನ್ನು ಟೈಪ್ ಮಾಡಿದ್ದರು. ಅಲ್ಲೇ ಪ್ರಿಂಟ್ ತೆಗೆದೆವು. ಆ ಪ್ರಿಂಟರ್ ನ ಕಂಪನಿ ಯಾವುದೇ ಎಂದು ನೆನಪಿಲ್ಲ. ಆ ಮಹಜರ್ ನಲ್ಲಿ ಇರುವ ಫೋಟೋದಲ್ಲಿ ಪ್ರಿಂಟರ್ ಕಾಣಿಸುತ್ತಿಲ್ಲ ಎಂದರೆ ಸರಿ. ಸ್ಥಳದಲ್ಲಿ ಯಾವುದೇ ಪ್ರಿಂಟರ್ ತೆಗೆದುಕೊಂಡು ಹೋಗಿ ಮಹಜರ್ ಮಾಡಿ ಪ್ರಿಂಟ್ ತೆಗೆದಿಲ್ಲ ಎಂದರೆ ಸರಿ ಅಲ್ಲ. ಸದರಿ ಕಾಲಕ್ಕೆ ಯಾವುದೇ ವಿಡಿಯೋ ಮಾಡಿಲ್ಲ. ಪಂಚರಿಗೆ ಪ್ರತ್ಯೇಕ ನೋಟೀಸ್ ನೀಡಿಲ್ಲ.

3. ಮು.ಮಾ 1 ರಿಂದ 4 ರಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಮಾನ್ಯವಾಗಿ ಸಿಗುತ್ತವೆ. ಸದರಿ ವಸ್ತುಗಳನ್ನು ಪಿರ್ಯಾದಿಯವರು ಹಾಜರು ಪಡಿಸಿದ್ದರು. ಪಿರ್ಯಾದಿಯವರು ಆ ಮುದ್ದೆಮಾಲುಗಳನ್ನು ಎಲ್ಲಿ ಇಟ್ಟಿದ್ದರು ಎಂದು ತನಿಖೆ ಮಾಡಿಲ್ಲ. MLC ಯಲ್ಲಿ ಕಲ್ಲು ಇದ್ದ ಬಗ್ಗೆ ಗಾಯಾಳು ಹೇಳಿಲ್ಲ ನಂತರದಲ್ಲಿ ಮಹಜರ್ ನಲ್ಲಿ ಸೇರಿಸಿದ್ದೇವೆ ಎಂದರೆ ಸರಿ ಅಲ್ಲ. ಆರೋಪಿತರನ್ನು

ಗುರುತಿಸುವ ಬಗ್ಗೆ TIP ಮಾಡಿಲ್ಲ. ನಾನು ಸಾಕ್ಷಿದಾರರ ಹೇಳಿಕೆಗಳನ್ನು ಸ್ವತಂತ್ರ ಸಾಕ್ಷಿದಾರರ ಮುಂದೆ ಪಡೆದುಕೊಂಡಿಲ್ಲ ಹಾಗೂ ಸದರಿ ಸಮಯದಲ್ಲಿ ವಿಡಿಯೋ ಮಾಡಿಲ್ಲ. ಸದರಿ ಸಾಕ್ಷಿಗಳ ಹೇಳಿಕೆಗಳನ್ನು ನ್ಯಾಯಾಧೀಶರ ಮುಂದೆ ಮಾಡಿಸುವ ತೊಂದರೆ ಇರಲಿಲ್ಲ. ಸದರಿ ಹೇಳಿಕೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿ ಅಲ್ಲ.

4. ನಾನು ಸ್ಥಳದಲ್ಲಿ CCTV ಪಡೆಯುವ ಪ್ರಯತ್ನ ಮಾಡಿದೆ ಆದರೆ ಅಲ್ಲಿ ಯಾವುದೇ CCTV ಇರಲಿಲ್ಲ. ಅಲ್ಲಿ CCTV ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಸ್ಥಳದ್ಲಿ ಇದ್ದ ಬಗ್ಗೆ Tower Dumping and Tower Location ಬಗ್ಗೆ CDR ಪಡೆದಿಲ್ಲ. ಗಾಯಾಳುವಿನ ಹಿನ್ನೆಲೆಯನ್ನು ನಾನು ವಿಚಾರಣೆ ಮಾಡಿಲ್ಲ. ಗಾಯಾಳು ರೌಡಿ ಶೀಟರ್ ಎಂದರೆ ಗೊತ್ತಿಲ. ಗಾಯಾಳುವಿನ ವಿರುದ್ಧ ಕೊಲೆ ಪ್ರಕರಣಗಳು ಮತ್ತು ಡಕಾಯಿತಿ ಪ್ರಕರಣಗಳು ಇವೆ ಎಂದರೆ ಗೊತ್ತಿಲ್ಲ. ಗಾಯಾಳು ರಾಜಕೀಯವಾಗಿ ತೊಡಗಿಸಿಕೊಂಡಿದ್ದಾನೆ ಎಂದರೆ ಸರಿ. ದೂರನ್ನು ಗ್ರಾಮ ಪಂಚಾಯ್ತಿ ವೈಷಮ್ಯದಿಂದ ನೀಡಿರುವುದು ಎಂದರೆ ಸರಿ.

5. ಗಾಯಾಳು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರವೂ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ದಾಖಲೆಗಳನ್ನು ತೆಗೆದುಕೊಂಡಿಲ್ಲ. ಪ್ರತ್ಯಕ್ಷ ಸಾಕ್ಷಿಗಳಿಗೆ ಯಾವುದೇ ನೋಟೀಸ್ ನೀಡಿಲ್ಲ. ಈ ಪ್ರಕರಣದ ಸಾಕ್ಷಿದಾರರಿಗೆ ಯಾವುದೇ ನೋಟೀಸ್ ನೀಡಿಲ್ಲ. ಅಂತಿಮ ವರದಿ ಸಲ್ಲಿಸುವ ಮೊದಲು ಗಾಯಾಳುವಿನ ಗಾಯಾದ ಸ್ಥಿತಿಯ ಬಗ್ಗೆ ಯಾವುದೇ ದಾಖಲೆ ಪಡೆದುಕೊಂಡಿಲ್ಲ. ಗಾಯಾಳುವಿನ ಶರ್ಟ ನಲ್ಲಿ ಇದ್ದ ರಕ್ತದ ಗುಂಪು ಮತ್ತು ಆತನ ರಕ್ತದ ಗುಂಪು ಯಾವುದು ಎಂದು ಆತ ಆಸ್ಪತ್ರೆಯಲ್ಲಿ ಇದ್ದಾಗಲೇ ಪರೀಕ್ಷೆ ಮಾಡಿಸಿದ್ದೆ. FSL ಗೆ ನಾನು ಆ ರೀತಿ ರಕ್ತದ ಗುಂಪು ಕಂಡು ಹಿಡಿಯಲು ಕಳುಹಿಸಿಕೊಟ್ಟಿಲ್ಲ. ಗಾಯಾಳವಿನ ಶರ್ಟ ಮೇಲೆ ರಕ್ತ ಯಾವಾಗ ಯಾವ ರೀತಿ ಬಂತು ಎಂದು ಪರೀಕ್ಷೆ ಮಾಡುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಆ ಶರ್ಟ ಮೇಲೆ ಇದ್ದದ್ದು ಆತನದೇ ರಕ್ತ ಎಂದು ಎಲ್ಲೂ ಇಲ್ಲ ಎಂದರೆ ಸರಿ ಅಲ್ಲ. ಘಟನಾ ಸ್ಥಳದಿಂದ ಆಸ್ಪತ್ರೆಗೆ ಹೋಗಲು ಸುಮಾರು 1 ಗಂಟೆ ಬೇಕು. ಅವರು ರಾತ್ರಿ 10.30 ರಿಂದ 2.00 ಗಂಟೆಯ ವರೆಗೆ ಎಲ್ಲಿ ಇದ್ದರೂ ಎಂದು ನಾನು ತನಿಖೆ ಮಾಡಿಲ್ಲ. ಗಾಯಾಳು ಸ್ಥಳದಲ್ಲಿ ಇದ್ದ ಬಗ್ಗೆ Tower Dumping and Tower Location ಬಗ್ಗೆ CDR ಪಡೆದಿಲ್ಲ.

6. ಗಾಯದ ಪ್ರಮಾಣದ ಪತ್ರದಲ್ಲಿ ಆರೋಪಿತರು ನಮೂದು ಆಗಿಲ್ಲ ಎಂದರೆ ಸರಿ. ಗಾಯದ ಪ್ರಮಾಣ ಪತ್ರದಲ್ಲಿ ಆರೋಪಿತರ ಹೆಸರು ಇಲ್ಲದೇ ಇದ್ದರಿಂದ ನನಗೆ ಹೇಗೆ ಬೇಕೋ ಹಾಗೇ ಆರೋಪಿತರನ್ನು ಸಿಲುಕಿಸಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರ ಹಾಗೂ ಗಾಯಾಳುವಿನ ವೈಷಮ್ಯದ ನಡುವೆ ಮೊದಲು ಯಾವುದೇ ದೂರು ದಾಖಲಾಗಿಲ್ಲ. ಆರೋಪಿತರ ಪೈಕಿ ಒಬ್ಬರು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಸರ್ಕಾರಿ ನೌಕರರು ಇದ್ದಾರೆ ಎಂದರೆ ಸರಿ. ಎಲ್ಲಾ ಆರೋಪಿತರು ಒಂದೇ ಕುಟುಂಬದವರು ಮತ್ತು ದಲಿತ ಸಮುದಾಯದವರು ಎಂದರೆ ಸರಿ. ಗಾಯಾಳು ಗೌಡ ಜಾತಿಯವರು ಎಂದರೆ ಸರಿ.

7. ಸದರಿ ಊರಿನಲ್ಲಿ ಜಾತಿ ವ್ಯವಸ್ಥೆ ಇದೆ ಎಂದರೆ ಸರಿ ಅಲ್ಲ. ದಲಿತ ಸಮುದಾಯವರು ಅಧ್ಯಕ್ಷರಾಗಿದ್ದರಿಂದ ಗಾಯಾಳು ಕೊಟ್ಟ ದೂರನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ ಅಲ್ಲ. ಗಾಯಾಳು ಯಾವ ಪಕ್ಷದಲ್ಲಿ ಕೆಲಸ ಎಂದು ಗೊತ್ತಿಲ್ಲ ಹಾಗೂ ಅದೇ ರೀತಿ ಆರೋಪಿತರು ಯಾವ ಪಕ್ಷಕ್ಕೆ ಸೇರಿದವರು ಎಂದು ಗೊತ್ತಿಲ್ಲ. ದೂರುದಾರರ ಹಾಗೂ ರಾಜಕೀಯ ಪಕ್ಷದವರ ಜೊತೆಗೆ ಸೇರಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.